ಜಾಲತಾಣ ನಿರ್ಮಿಸುವಾಗ ವಿಷಯಗಳು ಅಳ್ಳಕವಾಗುತ್ತವೆ, ಒಮ್ಮೊಮ್ಮೆ ಅಲ್ಲಿ ಬರೀ ಪದಗಳೇ ಇರುತ್ತವೆ. ವಿಷಯ ಇರುವುದೇ ಇಲ್ಲ.

ಇನ್ನು ಕೆಲವು ಸಾರಿ ವಿಷಯವೇ ಇರುವುದಿಲ್ಲ. ಬರೀ ವಿಷ ಇರುತ್ತದೆ. ಜೀವನ ತೋರಿಸಲಾಗದ ಎಷ್ಟೋ ಸತ್ಯಗಳನ್ನು ಜಾಲತಾಣ ತೋರಿಸಿಬಿಡುತ್ತದೆ. ಏಕೆಂದರೆ ಇಲ್ಲಿ ಅವಮಾನ ಎನ್ನುವುದು ಒಂದೇ ಒಂದು ಕಾಮೆಂಟಿನಲ್ಲಿ ಅನಾವರಣ ಆಗುವಂಥದ್ದು.

ಸ್ನೇಹಿತನೊಬ್ಬ ಸಹೋದ್ಯೋಗಿ ಹೆಣ್ಣು ಮಗಳೊಬ್ಬಳ ಬಗ್ಗೆ ಟೀಕೆಯ ಸ್ಟೇಟಸ್ ಹಾಕುತ್ತಾ ತನಗೆ ಸಿಕ್ಕದ ಅವಕಾಶ ಅವಳಿಗೆ ಸಿಕ್ಕಿದೆ ಎನ್ನುವುದನ್ನು 'ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ, ಕೆಲವೊಮ್ಮೆ ಮೊಣಕಾಲ ಮೇಲೆ' ಎನ್ನುವ ಅರ್ಥ ಬರುವ ಹಾಗೆ ಬರೆದು ತನ್ನ ವಿಕೃತಿಯನ್ನು ತೋರಿಸಿಕೊಂಡಿದ್ದ.

ಅದನ್ನು ನೋಡಿ ಸ್ನೇಹಿತರಲ್ಲಿ ಕೆಲವರು ನಕ್ಕಿದ್ದರು, ಕುಹಕವಾಡಿದ್ದರು, ಆದರೆ ಕೆಲವು ಹೆಣ್ಣು ಮಕ್ಕಳು ಮಾತ್ರ ಸರಿಯಾಗಿ ಕ್ಲಾಸ್ ತೆಗೆದಿದ್ದರು. ಇನ್ನು ಕೆಲವರು ಇನ್‌ಬಾಕ್ಸ್ ವೀರರು ಅವನಿಗೆ ಮೆಸೇಜ್ ಮಾಡಿ ಆಕೆ ಯಾರು ಎಂದು ಕುತೂಹಲದಿಂದ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದರು.

ಕಡೆಗೆ ಇವನು ಬರೆದದ್ದು ಆಯಮ್ಮನಿಗೆ ಗೊತ್ತಾಗಿ ಅದನ್ನು ಪ್ರಿಂಟ್ ಔಟ್ ತೆಗೆದುಕೊಂಡು ಅವಳ ಮೇಲಧಿಕಾರಿಗಳಿಗೆ ಕಂಪ್ಲೇಟ್ ಕೊಡಲಾಗಿ ಎಲ್ಲವೂ ದಾರಿಗೆ ಬಂತು.

ಇನ್‌ಬಾಕ್ಸ್ ವೀರರ ಬಗ್ಗೆ ಹೇಳಬೇಕು. ಇವರು ಬಹಿರಂಗವಾಗಿ ಒಂದು ನಿಲುವು ಪ್ರದರ್ಶಿಸುತ್ತಾ, ಇನ್‌ಬಾಕ್ಸಿನಲ್ಲಿ ಮತ್ತೊಂದು ವ್ಯಕ್ತಿತ್ವ ತೋರಿಸುವಂತಹವರು. ಇವರಿಗೆ ನಿದ್ದೆ–ಗಿದ್ದೆ ಬರುತ್ತೋ ಇಲ್ಲವೋಪ್ಪ.

ನಟ್ಟ ನಡು ರಾತ್ರಿಯಲ್ಲಿ ಬರೀ ಟೈಮ್ ನೋಡಲು ಫೋನ್ ಆನ್ ಮಾಡಿಕೊಂಡರೂ ಸಾಕು ಚಾಟ್ ಬಾಕ್ಸಿಗೆ "ಹಾಯ್, ಹಾಯ್, ಹಾಯ್ ನಿದ್ದೆ ಬಂದಿಲ್ವಾ? ಊಟ ಆಯ್ತಾ" ಅಂತೆಲ್ಲಾ ಸುರು.

ಪುಣ್ಯಕೋಟಿಯ ಹಾಡಿನ 'ಮುಂದೆ ಬಂದರೆ ಹಾಯಬೇಡಿ'ಗೆ ಇನ್ನೊಂದು ಅರ್ಥ ಇದೇ ಇರಬಹುದಾ ಎಂದು ಗುಮಾನಿ ನನಗೆ.

ಯಾಕೆಂದರೆ ಇವರು ವರ್ಷಾನುಗಟ್ಟಲೆ ಉತ್ತರ ಬರದೆ ಹೋದರೂ ಸಾವಿರಾರು ಹಾಯ್‌ಗಳನ್ನು ಕಳಿಸುತ್ತಲೇ ಇರುವ ಹಾಯಿ ಪ್ರೇಮಿಗಳು. ಇವರ ಆಶಾಭಾವನೆಗೆ ಸಾಟಿಯೇ ಇಲ್ಲ. ಕೆಲವೊಮ್ಮೆ ಇವರು ಲೌಕಿಕದಲ್ಲಿ ಯಾವಾಗಲಾದರೂ ಬದುಕುತ್ತಾರಾ ಎನ್ನುವ ಅನುಮಾನ ಬರುತ್ತದೆ.

ಪುಟ್ಟ ಊರೊಂದರಲ್ಲಿ ವಾಸಿಸುತ್ತಿರುವ ನನ್ನ ಸ್ನೇಹಿತೆಯೊಬ್ಬಳಿಗೆ ಒಬ್ಬ ದೊಡ್ಡ ಲೇಖಕರನ್ನು ಕಂಡರೆ ಅತ್ಯಂತ ಅಚ್ಚುಮೆಚ್ಚು. ಅವರ ಪ್ರತೀ ಲೇಖನವನ್ನು ಅಕ್ಷರ ಅಕ್ಷರ ಬಿಡದೆ ಓದುವುದು ಅವಳ ಹವ್ಯಾಸ. ಓದಿದ ನಂತರ ಮೆಲುಕು ಹಾಕುವುದು... ಚರ್ಚೆ ಮಾಡುವುದು ಹೀಗೆ ನಡೆದಿರುತ್ತಿತ್ತು ಅವಳ ಹೀರೋ ಭಜನೆ. ಅವಳ ಮಗ ಒಂದು ಮಂಗಳಕರವಾದ ದಿನ ಫೇಸ್‌ಬುಕ್ಕನ್ನು ತೋರಿಸಿಕೊಟ್ಟು ಇದರಲ್ಲಿ ನಿನ್ನ ಹಳೇ ಸ್ನೇಹಿತರನ್ನು ಹುಡುಕಿಕೊಂಡು ಮಾತಾಡಬಹುದು, ಕ್ಲಾಸ್ಮೇಟುಗಳೂ ಎಲ್ಲರೂ ಸಿಗ್ತಾರೆ ಅಂತ ಹೇಳಿದ್ದಾನೆ.

ತಗೋ ಆವತ್ತಿಂದ ಮಾಹಿತಿ ಗಣಿಗಾರಿಕೆ ಶುರು ಮಾಡಿಕೊಂಡಿದ್ದಾಳೆ. ಅವಳ ಹೆಸರು, ಇವಳ ಊರು, ಮತ್ತೊಬ್ಬಳ ಅಡ್ಡ ಹೆಸರು ಎಲ್ಲಾ ಕಾಂಬಿನೇಶನ್ನುಗಳನ್ನೂ ವರ್ಕೌಟ್ ಮಾಡೀ ಮಾಡೀ ಎಷ್ಟೋ ಜನರನ್ನು ಫ್ರೆಂಡ್ ಮಾಡಿಕೊಂಡು ಅವರೊಂದಿಗೆ ಮಾತೂ ಆಡಿದ್ದಳು ತಿಂಗಳೊಪ್ಪತ್ತಿನ ಸಮಯದೊಳಗೆ.

ಸ್ವಲ್ಪ ದಿನದಲ್ಲೇ ಇದೆಲ್ಲಾ ಬೇಸರ ಬಂದಿದೆ. ಹಲೊ, ಹಾಯ್, ಊಟ ತಿಂಡಿ, ಹೊಸ ಬಟ್ಟೆ, ಬಂಗಾರ, ಮಕ್ಕಳ ಸ್ಕೂಲು, ಕೆಲಸ ಇವೆಲ್ಲಾ ಮುಗಿದ ಹೊತ್ತಿಗೆ ಇನ್ನೇನು ಮಾತು ಉಳಿದಿರುತ್ತೆ?